ಸಂವಿಧಾನದ ಆಶಯಗಳನ್ನು ಕಗ್ಗೊಲೆ ಮಾಡುತ್ತಿರುವ ಸಿಎಂ

ರಾಜ್ಯ ಬಿಜೆಪಿ ರೈತ ಮೋರ್ಚಾ ಪ್ರಧಾನ ಕಾರ್ಯದರ್ಶಿ ಕಲ್ಮರುಡಪ್ಪ ಆಕ್ರೋಶ

• **ಕನ್ನಡಪ್ರಭ ವಾರ್ತೆ** ಚಿಕ್ಕಮಗಳೂರು

ಶೃಂಗೇರಿ ವಿಧಾನಸಭಾ ಕ್ಷೇತ್ರದಲ್ಲಿ ಅಂಚೆ ಮತ ಮರು ಎಣಿಕೆಯಲ್ಲಿ ಮತ ಡಕಾಯಿತಿ ಆಗಿದೆ ಎಂಬ ಪದ ಬಳಕೆ ಮಾಡುವ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ಹುದ್ದೆಯ ಘನತೆಯನ್ನು ತಗ್ಗಿಸಿ ಪ್ರಜಾಪ್ರಭುತ್ವ ವ್ಯವಸ್ಥೆಗೆ ದಕ್ಕೆ ಉಂಟು ಮಾಡಿದೆ. ಸಂವಿಧಾನದ ಆಶಯಗಳನ್ನು ಕಗ್ಗೊಲೆ ಮಾಡಲು ಹೊರಟಿದ್ದಾರೆ ಎಂದು ರಾಜ್ಯ ಬಿಜೆಪಿ ರೈತ ಮೋರ್ಚಾ ಪ್ರಧಾನ ಕಾರ್ಯದರ್ಶಿ ಎಚ್. ಸಿ. ಕಲ್ಮರುಡಪ್ಪ ಆಕ್ರೋಶ ವ್ಯಕ್ತಪಡಿಸಿದರು.



ನಗರದ ಪ್ರೆಸ್‌ಕ್ಲಬ್‌ನಲ್ಲಿ ಗುರುವಾರ ಸುದ್ದಿ ಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂವಿಧಾನ ಬದ್ಧವಾದ ವ್ಯವಸ್ಥೆಯಲ್ಲಿ ಜಿಲ್ಲಾಡಳಿತ ಪೊಲೀಸ್ ಇಲಾಖೆ ಚುನಾವಣಾ ಆಯೋಗ-ನ್ಯಾಯಾಂಗ ವ್ಯವಸ್ಥೆಗಳ ಮೂಲಕ ಡಿ.ಎನ್. ಜೀವರಾಜ್ ಶಾಸಕ ರಾಗಿದ್ದಾರೆ. ಆದರೆ, ಕಾಂಗ್ರೆಸ್ ಕಾರ್ಯಕರ್ತರು ಸಂವಿಧಾನ ಮತ್ತು ಅಂಬೇಡ್ಕರ್‌ಬಗ್ಗೆ ಮಾತನಾಡುತ್ತಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಶೃಂಗೇರಿ ಕ್ಷೇತ್ರದ ಅಂಚೆ ಮತಗಳ ಎಣಿಕೆಯಲ್ಲಿ ಅಕ್ರಮ ನಡೆದಿರುವುದನ್ನು ಪ್ರಶ್ನಿಸಿ, ಜೀವರಾಜ್ ಅವರು ಹೈಕೋರ್ಟ್ ಮೊರೆ ಹೋಗಿ ಹೋರಾಟ ನಡೆಸಿದ್ದಾರೆ. ಜೀವರಾಜ್ ಅವರ ನಿರಂತರ ಹೋರಾಟದ ಫಲವಾಗಿ ನ್ಯಾಯಾಲಯ ಅಂಚೆ ಮತಗಳ ಮರು ಎಣಿಕೆಗೆ ಆದೇಶ ನೀಡಿತ್ತು. ಅಂಚೆ ಮತಗಳ ಮರು ಎಣಿಕೆಯಲ್ಲಿ ಕಾಂಗ್ರೆಸ್ ನಡೆಸಿದ್ದ ಅಕ್ರಮ ಬಯಲಾಗಿದೆ. ಹೀಗಾಗಿ ತಮ್ಮ ಅಕ್ರಮ ಮುಚ್ಚಿ ಹಾಕಿ ಕೊಳ್ಳಲು ಕಾಂಗ್ರೆಸ್ ಕಾರ್ಯಕರ್ತರು ಹತಾಶರಾಗಿ ಹೇಳಿಕೆ ನೀಡುತ್ತಿದ್ದಾರೆ ಎಂದರು.

ರಾಜ್ಯದಲ್ಲಿ ಕಳೆದ ಮೂರು ವರ್ಷದಿಂದ ಕಾಂಗ್ರೆಸ್ ಅಧಿಕಾರದಲ್ಲಿದೆ. ಶೃಂಗೇರಿ ಕ್ಷೇತ್ರದ ಅಂಚೆ ಮತಗಳ ಮರು ಎಣಿಕೆಗೆ ಎರಡು ಬಾರಿ ಮನವಿ ಮಾಡಿದರು. ಸರ್ಕಾರ ಏಕೆ ಅನುಮತಿ ಕೊಡಲಿಲ್ಲ ಎಂದು ಪ್ರಶ್ನಿಸಿದ ಅವರು, ಸರ್ಕಾರ ನಿಮ್ಮ ಕೈ ಯಲ್ಲಿದ್ದರೂ ಈಗ ಬಿಜೆಪಿ ವಿರುದ್ಧ ಆರೋಪ ಮಾಡುವ ಕಾಂಗ್ರೆಸ್ ಮುಖಂಡರು ತಮ್ಮ ತಪ್ಪನ್ನು ಮುಚ್ಚಿಕೊಳ್ಳಲು ಹೊರಟಿದ್ದಾರೆ ಎಂದು ಹೇಳಿದರು.

ರಾಜ್ಯದಲ್ಲಿ 135 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಗೆಲುವು ಸಾಧಿಸಿದ ನಂತರ ಶೃಂಗೇರಿ ವಿಧಾನಸಭಾ ಕ್ಷೇತ್ರದ ಅಂಚೆ ಮತಗಳ ಎಣಿಕೆ ವೇಳೆ 170 ತಿದ್ದಿರುವ ಮತಗಳ ಕಟ್ಟನ್ನು ರಾಜೇಗೌಡರ ಬಾಕ್ಸ್‌ನಲ್ಲಿ ಏಕೆ ಹಾಕಿರಬಾರದು?. ಮೂರು ವರ್ಷದಿಂದಲೂ ಕಾಂಗ್ರೆಸ್ ಸರ್ಕಾರವೇ ಅಧಿಕಾರದಲ್ಲಿದ್ದರೂ ಈಗ ಕಾಂಗ್ರೆಸ್ಸಿಗರು ತನಿಖೆ ನಾಟಕವಾಡುತ್ತಿದ್ದಾರೆ. ನೀವು ಯಾವ ತನಿಖೆ ಮಾಡಿದರೂ ನಾವು ಸಿದ್ಧರಿದ್ದೇವೆ. ಸತ್ಯ ಎಂದಿದ್ದರೂ ಸತ್ಯವಾಗಿಯೇ ಇರುತ್ತದೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಮುಖಂಡರಾದ ಹಿರೇ ಮಗಳೂರು ಪುಟ್ಟಸ್ವಾಮಿ, ಕುರುವಂಗಿ ವೆಂಕಟೇಶ್, ನರೇಂದ್ರ, ಈಶ್ವರಹಳ್ಳಿ ಮಹೇಶ್ ಮತ್ತಿತರರಿದ್ದರು.

ಗೋಲ್ಡ್ ಲೋನ್ ಹಣ ಲಪಟಾಯಿಸಿದ ಸೈಬರ್ ಕಳ್ಳರು

ಚಿಕ್ಕಮಗಳೂರು: ನಗರದ ಯೂಕೋ ಬ್ಯಾಂಕ್ ನಲ್ಲಿ ಚಿನ್ನ ಅಡವಿಟ್ಟ ಸಾಲದ ರೂಪದಲ್ಲಿ ಪಡೆದ ಹಣಬ್ಯಾಂಕ್ ಖಾತೆಗೆ ಜಮಾಗೊಂಡ ಕೆಲವೇ ಕ್ಷಣಗಳಲ್ಲಿ ಅದರಲ್ಲಿ ಒಂದು ಲಕ್ಷವನ್ನು ಸೈಬರ್‌ವಂಚಕರು ಖಾತೆಯಿಂದಲೇಲಪಟಾಯಿಸಿದ ಘಟನೆ ನಡೆದಿದೆ.

ಹಣ ಕಳೆದುಕೊಂಡ ವ್ಯಕ್ತಿಗೆ ಯಾವುದೇ ಓಟಿಪಿ ಅಥವಾ ಅನುಮಾನಾಸ್ಪದ ಲಿಂಕ್ ಬಂದಿಲ್ಲ. ಆದರೂ ಹಣ ದೋಚಿರುವುದು ಆಘಾತಕಾರಿ ಎನಿಸಿದೆ. ಚಿಕ್ಕ ಮಗಳೂರು ಮೂಲದ ವಕೀಲರೊಬ್ಬರು ಚಿನ್ನ ಅಡವಿಟ್ಟು ಯೂಕೋ ಬ್ಯಾಂಕ್ ನಲ್ಲಿ ₹4.14 ಲಕ್ಷ ಲೋನ್ ಪಡೆದಿದ್ದರು. ಈ ಮೊತ್ತ ಅವರ ಬ್ಯಾಂಕ್ ಖಾತೆಗೆ ಜಮೆಯಾದ ತಕ್ಷಣವೇ ಖಾತೆಯಿಂದ ಹಣಕಳವಾಗಿದೆ. ತಕ್ಷಣ ಬ್ಯಾಂಕ್ ಮ್ಯಾನೇಜರ್ ಗಮನಕ್ಕೆ ತಂದಾಗ ಸೈಬರ್ ದೂರು ನೀಡುವಂತೆ ತಿಳಿಸಿದ್ದಾರೆ. ಅದರಂತೆ ಸೈಬರ್ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಲಾಗಿದೆ.

₹18.24 ಲಕ್ಷ ಸೈಬರ್ ವಂಚನೆ

ಚಿಕ್ಕಮಗಳೂರು: ಖಾಸಗಿ ಬ್ಯಾಂಕ್ ಖಾತೆಯಲ್ಲಿದ್ದ ₹18.24 ಲಕ್ಷವನ್ನು ಸೈಬರ್ ವಂಚನೆಯಡಿ ಮಹಿಳೆ ಕಳೆದುಕೊಂಡಿದ್ದಾರೆ. ಚಿಕ್ಕಮಗಳೂರು ನಗರದ ಐಡಿಎಫ್‌ಸಿ 1 ನೇ ಬ್ಯಾಂಕ್ ಉಳಿತಾಯ ಖಾತೆಯಲ್ಲಿ ಮಾ.4-ಏ.21 ರಂದು ₹18,24,000ಕಟಾವು ಆಗಿರುತ್ತದೆ. ಆದರೆ ಈ ಬಗ್ಗೆ ಮೊಬೈಲ್‌ಗೆ ಯಾವುದೇ ಸಂದೇಶ ಬಂದಿಲ್ಲ. ಯಾವುದೇ ರೀತಿ ಒಟಿಪಿಯನ್ನು ನಾನು ನೀಡಿಲ್ಲ. ಆದರೂ ಸಹ ನನ್ನ ಖಾತೆಯಿಂದ ಹಣ ಕಟಾವು ಆಗಿದೆ. ಈ ಬಗ್ಗೆ ಐಡಿಎಫ್‌ಸಿ ಬ್ಯಾಂಕ್ ಮ್ಯಾನೇಜರ್‌ಬಳಿ ವಿಚಾರಿಸಿದಾಗ ಸೈಬರ್‌ಕಳ್ಳತನವಾಗಿದೆ ಎಂದು ತಿಳಿಸಿದ ಹಿನ್ನೆಲೆಯಲ್ಲಿ ಸೈಬರ್ ಠಾಣೆಗೆ ದೂರು ನೀಡಿದ್ದಾರೆ.

ಕನ್ನಡಪ್ರಭ
ಶುಕ್ರವಾರ 8.05.2026

ನಾಡು,ನುಡಿ ಅಭಿವೃದ್ಧಿಗೆ ಕಸಾಪ ಕೊಡುಗೆ ಅಪಾರ

ಕಡೂರು: ನಾಡು ನುಡಿಯ ಬೆಳವಣಿಗೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಕೊಡುಗೆ ಅಪಾರ ಎಂದು ಪುರಸಭೆ ಮಾಜಿ ಅಧ್ಯಕ್ಷ ಭಂಡಾರಿ ಶ್ರೀನಿವಾಸ್ ಹೇಳಿದರು. ಕನ್ನಡ ಭವನದಲ್ಲಿ ಕಸಾಪದಿಂದ ನಡೆದ ಕಸಾಪ 112 ನೇ ಸಂಸ್ಥಾಪನಾ ದಿನಾಚರಣೆ ಉದ್ಘಾಟಿಸಿ ಮಾತನಾಡಿ ಪರಿಷತ್ತು ಸಾಹಿತ್ಯಕ್ಕೆ ಸೀಮಿತವಾಗದೆ ಕನ್ನಡದ ಅಸ್ಮಿತೆ ಕಾಪಾಡುವ ಶಕ್ತಿಯಾಗಿ ಬೆಳೆದು ನಿಂತಿದೆ. ಜಿಲ್ಲೆಯಲ್ಲೂ ಕಸಾಪ ಜಿಲ್ಲಾ ಮತ್ತು ತಾಲೂಕು ಘಟಕಗಳು ಕ್ರಿಯಾಶೀಲವಾಗಿ ಸಾಹಿತ್ಯಕ ಚಟುವಟಿಕೆ ನಡೆಸುತ್ತಿರುವುದು ಶ್ಲಾಘನೀಯ. ಪಟ್ಟಣದಲ್ಲಿ ಕಳೆದ ಏಪ್ರಿಲ್ ನಲ್ಲಿ 3 ದಿನಗಳ ಕಾಲ ನಡೆದ ಜಿಲ್ಲಾ ಕಸಾಪ ಸಮ್ಮೇಳನ ಎಲ್ಲರ ಪ್ರೋತ್ಸಾಹದಿಂದ ಯಶಸ್ವಿಯಾಗಿದ್ದು ಹೆಮ್ಮೆಯ ಸಂಗತಿ. ಸಾಹಿತ್ಯದ ವೇದಿಕೆ ಗಳು ನಾಡು ನುಡಿ ರಕ್ಷಣೆಗೆ ಮತ್ತು ಭಾಷೆ ಬಲ ವರ್ಧನೆಗೆ ಪ್ರತಿಯೊಬ್ಬ ಕನ್ನಡಾಭಿಮಾನಿಗಳು ತೊಡಗಿಸಿಕೊಳ್ಳಬೇಕು ಎಂದರು. ಕಸಾಪ ತಾಲೂಕು ಅಧ್ಯಕ್ಷ ಚಿಕ್ಕನಲ್ಲೂರು ಪರಮೇಶ್, ಮಹಿಳಾ ಘಟಕದ ಅಧ್ಯಕ್ಷೆ ಲತಾ ರಾಜಶೇಖರ್, ಸಿಂಗಟಗೆರೆ ಸಿದ್ದಪ್ಪ, ಇಮ್ರಾನ್ ಅಹ್ಮದ್ ಬೇಗ್, ಕೃಷ್ಣಸ್ವಾಮಿ, ತುರುವನಹಳ್ಳಿ ರೇಣುಕಯ್ಯ, ಮಂಜುನಾಥ್, ಎನ್.ಎಚ್. ನಂಜುಂಡ ಸ್ವಾಮಿ, ಕೆ.ಜಿ.ಲೋಕೇಶ್ವರ್, ತಿಮ್ಮಯ್ಯ ಮತ್ತಿತರರಿದ್ದರು.

ಗರಿಷ್ಠ 30°c | ಕನಿಷ್ಠ 21°c

ಸುದ್ದಿ ಸಿಂಚನ

ಶಾಲೆ ಅಭಿವೃದ್ಧಿಗೆ ಪೋಷಕರ ಸಹಕಾರ ಉತ್ತಮ

ತರೀಕೆರೆ: ಪಟ್ಟಣದ ಕಂಬದಬೀದಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಅಭಿವೃದ್ಧಿಗೆ ಪೋಷಕರ ಸಹಕಾರ ಉತ್ತಮವಾಗಿದೆ ಎಂದು ಶಾಲೆ ಮುಖ್ಯೋಪಾಧ್ಯಾಯ ರಾಮಚಂದ್ರಪ್ಪ ಎಂ.ಬಿ,.ಹೇಳಿದ್ದಾರೆ. 2006-07ನೇ ಸಾಲಿನ ಹಳೆ ವಿದ್ಯಾರ್ಥಿಗಳಿಂದ ಶಾಲೆಯಲ್ಲಿ ನಡೆದ ಗುರುವಂದನಾ ಕಾರ್ಯಕ್ರಮ ಮತ್ತು ಸ್ನೇಹ ಸಮ್ಮಿಲನದ ಅಧ್ಯಕ್ಷತೆ ವಹಿಸಿ ಮಾತನಾಡಿ ಶಾಲೆಯ ಹಳೆ ವಿದ್ಯಾರ್ಥಿಗಳ ಪ್ರೋತ್ಸಾಹ ತುಂಬಾ ಚೆನ್ನಾಗಿದೆ. ಶಾಲೆಗೆ ಅಗತ್ಯವಿರುವ ವಸ್ತುಗಳನ್ನು ಕೊಡುಗೆಯಾಗಿ ನೀಡಿದ್ದಾರೆ ಎಂದು ತಿಳಿಸಿದರು. ಶಾಲೆಯಲ್ಲಿ ಕರ್ತವ್ಯ ನಿರ್ವಹಿಸಲು ನನಗ ಹೆಮ್ಮೆಯಾಗುತ್ತದೆ ಎಂದು ಅವರು ಹೇಳಿದರು. ಮಾಜಿ ಪುರಸಭಾಧ್ಯಕ್ಷ ಟಿ.ಎಸ್.ಪ್ರಕಾಶ್ ವರ್ಮ , ಮಾಜಿ ಪುರಸಭಾಧ್ಯಕ್ಷ ಟಿ.ಜೆ.ಗೋಪಿಗಕುಮಾರ್, ಶಾಲೆಯ ಹಳೆಯ ವಿದ್ಯಾರ್ಥಿಗಳು ಇದ್ದರು. ಹಳೆಯ ವಿದ್ಯಾರ್ಥಿಗಳಿಂದದ ಶಾಲೆಗೆ ರಾಷ್ಟ್ರನಾಯಕರ ಭಾವ 'ಚಿತ್ರ ಕೊಡುಗೆಯಾಗಿ ನೀಡಲಾಯಿತು. ಶಾಲೆ ಶಿಕ್ಷಕರು ಮತ್ತು ಶಾಲಾ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ನಾಳೆಯಿಂದ ಸುಗ್ಗಿಹಬ್ಬ

ಬಾಳೆಹೊನ್ನೂರು: ತುಪ್ಪೂರು ಬಿರೇಕಲ್ಲು ಭೂತೇಶ್ವರ ಸ್ವಾಮಿ ಹಾಗೂ ದುರ್ಗಾಪರಮೇಶ್ವರಿ ದೇವಸ್ಥಾನದಲ್ಲಿ ವಾರ್ಷಿಕ ಸುಗ್ಗಿಹಬ್ಬ ಕಾರ್ಯಕ್ರಮ ಮೇ.9 ಮತ್ತು 10ರಂದು ನಡೆಯಲಿದೆ ಎಂದು ದೇವಸ್ಥಾನ ಸಮಿತಿ ಕಾರ್ಯದರ್ಶಿ ಮಂಜುನಾಥ್ ತುಪ್ಪೂರು ತಿಳಿಸಿದ್ದಾರೆ. ಸುಗ್ಗಿ ಹಬ್ಬದ ಅಂಗವಾಗಿ ವಿಶೇಷ ಪೂಜೆ, ಶ್ರೀದೇವರ ಉತ್ಸವ, ದೂಪ-ದೀಪೋತ್ಸವ, ದೇವರಿಗೆ ಹರಕೆ ಸಮರ್ಪಣಾ ಕಾರ್ಯಕ್ರಮಗಳು ನಡೆಯಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಕ್ಕಳಲ್ಲಿ ಸೃಜನಶೀಲತೆ ಬೆಳೆಸಿ: ನಿರಂಜನ್ ಭಟ್

ಶೃಂಗೇರಿ: ಮಾನವೀಯ,ನೈತಿಕ ಮೌಲ್ಯಗಳು ಅದಪತನವಾಗುತ್ತಿರುವ ಇತ್ತಿಚ್ಚಿನ ದಿನಗಳಲ್ಲಿ ಮಕ್ಕಳಲ್ಲಿ ಸೃಜನಶೀಲತೆ,ಉತ್ತಮ ವ್ಯಕ್ತಿತ್ವ ಬೆಳೆಸಬೇಕು ಎಂದು ಅಹಂ ಬ್ರಹ್ಮಸ್ಮಿಯ ನಿರಂಜನ್ ಭಟ್ ಹೇಳಿದರು. ಪಟ್ಟಣದ ಸಚ್ಚಿದಾನಂದಪುರ ಜಯಭಾರತಿ ವಿದ್ಯಾಲಯದಲ್ಲಿ ಆಯೋಜಿಸಿದ್ದ ಮಕ್ಕಳಿಗೆ ವಿಶೇಷ ಬೇಸಿಗೆ ಶಿಬಿರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.ಎಳೆಯ ವಯಸ್ಸಿನಿಂದಲೇ ಮಕ್ಕಳಲ್ಲಿ ಉತ್ತಮ ಸಂಸ್ಕಾರ, ಸಂಸ್ಕೃತಿಗಳನ್ನು ಕಲಿಸಬೇಕು.ಶಿಕ್ಷಣ ಜೊತೆ ಶಿಸ್ತು,ಪ್ರಾಮಾಣಿಕತೆ, ವಿನಯ,ವಿವೇಕ ವನ್ನು ಕಲಿಸಬೇಕು.ಗುರುಹಿರಿಯರಿಗೆ ಭಕ್ತಿ,ಗೌರವ ನೀಡುವುದನ್ನು ಕಲಿಸಬೇಕು.ಎಳೆಯ ವಯಸ್ಸಿನಿಂದಲೇ ಶಿಸ್ತು,ಒಳ್ಳೆಯ ಸಂಸ್ಕಾರ ರೂಡಿಸಿದರೆ ಭವಿಷ್ಯದಲ್ಲಿ ಯೋಗ್ಯ ವ್ಯಕ್ತಿಗಳಾಗಿ ರೂಪುಗೊಳ್ಳಲು ಸಾಧ್ಯ. ಇಂದಿನ ಸ್ಪರ್ಧಾತ್ಮಕ ಕಾಲಘಟ್ಟದಲ್ಲಿ ಧಾರ್ಮಿಕ ಮೌಲ್ಯಗಳು,ನೈತಿಕತೆ,ಸಂಸ್ಕಾರಗಳನ್ನು ಕಲಿಸಬೇಕು. ಈ ಹಿನ್ನೆಲೆಯಲ್ಲಿ ಬೇಸಿಗೆ ಶಿಬಿರಗಳನ್ನು ಆಯೋಜಿಸುವುದು ಅತ್ಯಂತ ಒಳ್ಳೆಯ ಕೆಲಸ.ಶಿಬಿರದಲ್ಲಿ ಮಕ್ಕಳಿಗೆ ನಮ್ಮ ಸಂಸ್ಕೃತಿ,ಇತಿಹಾಸ,ಪರಂಪರೆ,ಮೌಲ್ಯಗಳು,ಧರ್ಮ,ಸಂಸ್ಕೃತ ಭಾಷೆ ಪ್ರಾಮುಖ್ಯತೆ ಬಗ್ಗೆ ತಿಳಿಸಬೇಕು.ಶಿಬಿರ ಮಕ್ಕಳ ಉತ್ತಮ ವ್ಯಕ್ತಿತ್ವ ನಿರ್ಮಾಣಕ್ಕೆ ಪೂರಕವಾಗುತ್ತದೆ ಎಂದರು. ಶಾಲಾ ಮುಖ್ಯ ಶಿಕ್ಷಕ ವಿನಯ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.ಶಿಕ್ಷಕ ರಾಜೇಂದ್ರ ಮತ್ತಿತರರು ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಉಪಸ್ಥಿತರಿದ್ದರು.

ಅಡಕೆ ಧಾರಣೆ

ಶಿವಮೊಗ್ಗ

- ಸರಕು.............. 54009 - 97896
- ಬೆಟ್ಟೆ................ 50119 - 65629
- ರಾಶಿಇಡಿ........... 46669 - 55399
- ಗೊರಬಲು.......... 19010 - 44601

ಕಾಫಿ ಧಾರಣೆ

- ಅರೇಬಿಕಾ ಪಾರ್ಚ್‌ಮೆಂಟ್........23,600
- ಅರೇಬಿಕಾ ಚೆರ‍್ರಿ.....................14,000
- ರೋಬಸ್ಟಾ ಪಾರ್ಚ್‌ಮೆಂಟ್.......18,150
- ರೋಬಸ್ಟಾ ಚೆರ‍್ರಿ.......................9,800

ರಬ್ಬರ್ ಧಾರಣೆ

- ಆರ್‌ಎಸ್‌ಎಸ್ (4)................248.00
- ಆರ್‌ಎಸ್‌ಎಸ್ (5)................243.00
- ಲಾಟ್ ಶೀಟ್.......................213.00



ತರೀಕೆರೆ ಕಂಬದಬೀದಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ ಗುರುವಂದನಾ ಕಾರ್ಯಕ್ರಮದಲ್ಲಿ ಮಾಜಿ ಪುರಸಭಾಧ್ಯಕ್ಷ ಟಿ.ಎಸ್.ಪ್ರಕಾಶ್ ವರ್ಮ ,ಮಾಜಿ ಪುರಸಭಾಧ್ಯಕ್ಷ ಟಿ.ಜೆ.ಗೋಪಿಗಕುಮಾರ್, ಶಾಲೆ ಮುಖ್ಯೋಪಾಧ್ಯಾಯ ರಾಮಚಂದ್ರಪ್ಪ ಎಂ.ಬಿ.ಮತ್ತಿತರರು ಭಾಗವಹಿಸಿದ್ದರು.



ಕಡೂರು ಪಟ್ಟಣದ ಕನ್ನಡ ಭವನದಲ್ಲಿ ಕಸಾಪ ಸಂಸ್ಥಾಪನಾ ದಿನಾಚರಣೆಯಲ್ಲಿಪುರಸಭೆ ಮಾಜಿ ಅಧ್ಯಕ್ಷ ಭಂಡಾರಿ ಶ್ರೀನಿವಾಸ್, ಚಿಕ್ಕನಲ್ಲೂರು ಪರಮೇಶ್, ಮಹಿಳಾ ಘಟಕದ ಅಧ್ಯಕ್ಷೆ ಲತಾ ರಾಜ ಶೇಖರ್, ಸಿಂಗಟಗೆರೆ ಸಿದ್ದಪ್ಪ, ಮತ್ತಿತರರು ಭಾಗವಹಿಸಿದ್ದರು.

ಗ್ರಾಮೀಣ ಮಕ್ಕಳ ಕೌಶಲ್ಯಕ್ಕೆ ವೇದಿಕೆ 'ಬೇಸಿಗೆ ಬೆಸುಗೆ'

ರಾಜ್ಯಸರ್ಕಾರದ ಮಹತ್ವಾಕಾಂಕ್ಷಿ ವಿನೂತನ ಕಾರ್ಯಕ್ರಮ | ಮೊದಲ ಪ್ರಯತ್ನದಲ್ಲೇ ಮಕ್ಕಳ ಮನಗೆದ್ದು ಯಶಸ್ವಿನತ್ತ ಹೆಜ್ಜೆ

- **ಕಡೂರು ಕೃಷ್ಣಮೂರ್ತಿ**
- **ಕನ್ನಡಪ್ರಭ ವಾರ್ತೆ** ಕಡೂರು

ನಗರ ಪ್ರದೇಶಗಳಲ್ಲಿ ಹೆಚ್ಚು ಪ್ರಚಲಿತದಲ್ಲಿದ್ದ ಸಮ್ಮರ್ ಕ್ಯಾಂಪ್ ಪರಿಕಲ್ಪನೆಯಡಿ ರಾಜ್ಯ ಸರ್ಕಾರ ಪ್ರಪ್ರಥಮ ಬಾರಿಗೆ ಆಯೋಜಿಸಿರುವ ಮಹತ್ವಾಕಾಂಕ್ಷಿ ವಿನೂತನ ಕಾರ್ಯಕ್ರಮಕ್ಕೆ ಗ್ರಾಮೀಣ ಪ್ರದೇಶಗಳಲ್ಲಿ ಮಕ್ಕಳಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ.

ಶಾಲೆಗೆ ರಜೆ ಇರುವ ಸಮಯದಲ್ಲಿ ಮಕ್ಕಳನ್ನು ಹೆಚ್ಚು ಕ್ರಿಯಾಶೀಲವಾಗಿರಿಸಲು ಸಹಾಯಕವಾಗುವ ರೀತಿಯಲ್ಲಿ ಈ 'ಬೇಸಿಗೆ ಬೆಸುಗೆ' ಶಿಬಿರ ಆಯೋಜಿಸಿ ಮಕ್ಕಳು ಕಲಿತ ಶಿಕ್ಷಣ ಮರೆಯದಂತೆ ಮೊಬೈಲ್ ಮತ್ತು ಟಿ.ವಿ.ಯಿಂದ ದೂರವಿಡುವ ಸದುದ್ದೇಶಹೊಂದಿರುವುದು ನಿಜಕ್ಕೂ ಸ್ವಾಗತಾರ್ಹ.

ಈ ಶಿಬಿರದ ಮೂಲಕ ಕಲಿತ ಶಿಕ್ಷಣದ ಜೊತೆ ಗ್ರಾಮೀಣ ಕ್ರೀಡೆಗಳಲ್ಲಿ ಮಕ್ಕಳು ಭಾಗವಹಿಸಿ ಸಾಂಪ್ರದಾಯಿಕ ಆಟೋಟಗಳನ್ನು ಆಡಿ ಖುಷಿ ಅನುಭವಿಸುವಂತೆ ಮಾಡಲು ಹಾಗೂ ಮುಂದಿನ ತಲೆಮಾರಿಗೂ ಇವುಗಳ ಮಹತ್ವ ತಿಳಿಸಿ, ಉಳಿಸಲು ಹಮ್ಮಿಕೊಂಡಿರುವ ಈ ಕಾರ್ಯಕ್ರಮ ಮೆಚ್ಚುಗೆಗೂ ಪಾತ್ರವಾಗಿದೆ.

ಅದರಲ್ಲೂ ಸರ್ಕಾರಿ ಕಾರ್ಯಕ್ರಮವಾದರೂ ಸರ್ಕಾರಿ ಮತ್ತು ಖಾಸಾಗಿ ಶಾಲೆ ಮಕ್ಕಳು ಇದರಲ್ಲಿ ಭಾಗವಹಿಸಲು ಅನುವು ಮಾಡಿರುವುದು ಸಹ ಒಂದು ಉತ್ತಮ ಹೆಜ್ಜೆ.

ಪ್ರತೀ ಜಿಪಂ ವ್ಯಾಪ್ತಿಯ ಗ್ರಾಮ ಪಂಚಾಯ್ತಿಗಳ ಮೂಲಕ ಈ ಬೇಸಿಗೆ ಬೆಸುಗೆ ಶಿಬಿರ ಅನುಷ್ಠಾನಗೊಳಿಸುತ್ತಿದೆ. ಇದಕ್ಕೆ ಗ್ರಾಮಗಳಲ್ಲಿ ಮಕ್ಕಳಿಗೆ ಮನರಂಜನೆ ಜೊತೆ ಆಟಪಾಟಗಳನ್ನುಆಡಿಸಿ ಸಂತೋಷದಿಂದ ಕಾಲಕಳೆಯುವಂತೆ ರೂಪಿಸಲಾಗಿದೆ. ಈ ಮಾದರಿ ಕಾರ್ಯಕ್ರಮ ಕಡೂರು ತಾಲೂಕಿನಲ್ಲಿ ಯಶಸ್ವಿಯಾಗಿದೆ.

ತಾಲೂಕಿನ ಪ್ರತೀ ಗ್ರಾಪಂ ಗ್ರಂಥಾಲಯದ ಅರಿವು ಕೇಂದ್ರಗಳಲ್ಲಿ ಈ ಶಿಬಿರ ನಡೆಯುತ್ತಿದ್ದು.



ಕಡೂರು ತಾಲೂಕಿನ ಗ್ರಾಮ ಪಂಚಾಯ್ತಿಯ ಅರಿವು ಕೇಂದ್ರಗಳಲ್ಲಿ ಹಮ್ಮಿಕೊಂಡಿರುವ ಬೇಸಿಗೆ ಬೆಸುಗೆ ಶಿಬಿರಗಳಲ್ಲಿ ಮಕ್ಕಳು ತನ್ಮಯತೆಯಿಂದ ಭಾಗವಹಿಸಿದ್ದರು.



ಬೇಸಿಗೆ ಬೆಸುಗೆ ಶಿಬಿರದಲ್ಲಿ ಮಕ್ಕಳಿಗೆ ಫೋಟೋಗ್ರಫಿ ತರಬೇತಿ ನೀಡಿದ ಬಳಿಕ ಕೆನಾನ್ ಸಂಸ್ಥೆಯಿಂದ ಪ್ರಮಾಣ ಪತ್ರಗಳನ್ನು ವಿತರಿಸಲಾಗಿದೆ.

ತಾಲೂಕಿನ ಪ್ರತಿ ಪಂಚಾಯ್ತಿಗಳ ಗ್ರಂಥಾಲಯದ ಅರಿವು ಕೇಂದ್ರಗಳಲ್ಲಿ ಶಿಬಿರ ನಡೆಯುತ್ತಿದೆ. ಶಿಬಿರ ಪ್ರವೇಶಕ್ಕೆ ಮಕ್ಕಳಿಗೆ ಐ.ಡಿ. ಕಾರ್ಡ್ ನೀಡುತ್ತಿದ್ದು, ಇದರಿಂದ ಮಕ್ಕಳು ಜಿಲ್ಲೆಯ ಯಾವುದೇ ಗ್ರಾಪಂಗಳ ಶಿಬಿರಕ್ಕೆ ಸೇರಬಹುದಾಗಿದೆ. ವೇಳಾ ಪಟ್ಟಿಯಂತೆ ಅಜ್ಜಿಯಂದಿರು, ಹಾಡುಗಳು, ಕಥೆ, ಹೇಳುವುದು, ಜನಪದ ಕಲೆ, ಚಿತ್ರಕಲೆ, ಆರೋಗ್ಯ, ಶಿಕ್ಷಣ, ಪಶು ವೈದ್ಯಕೀಯ ಮತ್ತು ವಿವಿಧ ಇಲಾಖೆಯಿಂದ ಸ್ಥಳ ಭೇಟಿ, ದಿನಪತ್ರಿಕೆ, ಪುಸ್ತಕಗಳನ್ನು ಓದುವುದು ಹಾಗು ಮಕ್ಕಳ ಬುದ್ಧಿ ಮತ್ತೆ ಹೆಚ್ಚಲು ಶಿಬಿರ ಸಹಕಾರಿ ಆಗಲಿದೆ.

- **ಸಿ.ಆರ್.ಪ್ರವೀಣ್** ತಾ.ಪಂ. ಕಾರ್ಯ ನಿರ್ವಾಹಕ ಕಡೂರು

ಏ.16ರಿಂದ ಆರಂಭವಾಗಿರುವ ಶಿಬಿರ ಮೇ 29 ರವರೆಗೆ ನಡೆಯಲಿದೆ. ಒಟ್ಟು 50 ದಿನಗಳ ಶಿಬಿರ ಇದಾಗಿದ್ದು. ಪ್ರತಿದಿನ ಬೆಳಿಗ್ಗೆ 10ರಿಂದ ಸಂಜೆ 5 ರವರೆಗೆ ಮಕ್ಕಳು ಖುಷಿಯಿಂದ ಪಾಲ್ಗೊಳ್ಳುತ್ತಿರುವುದು ಹೆಚ್ಚುಉಪಯುಕ್ತ ವಾಗಿದೆ. ಒಂದು ವೇಳೆ ಮಕ್ಕಳು ಅಜ್ಜಿಮನೆಗೆ ಬೇರೆ ಗ್ರಾಮಕ್ಕೆ ಹೋದರು ಈ ಶಿಬಿರ ತಪ್ಪಿಸಿ ಕೊಳ್ಳುವ ಬೇಸರವೇ ಇಲ್ಲ. ತಮ್ಮ ಗ್ರಾಮದ ಶಿಬಿರ ದಿಂದ ಕೊಡುವ ಐಡಿ ತಂದರೆ ಇವರು ಬೇರೆ ಗ್ರಾಮದ ಶಿಬಿರದಲ್ಲೂ ಭಾಗವಹಿಸಲು ಅವಕಾಶ 'ವಿರುವುದು ಮಕ್ಕಳಿಗೆ ಪ್ಲಸ್ ಪಾಯಿಂಟ್ ಆಗಿಪರಿಣಮಿಸಿದೆ. ಮಕ್ಕಳಿಗೆ ಸಂಪನ್ಮೂಲ ವ್ಯಕ್ತಿ ಗಳಿಂದ ಉಪನ್ಯಾಸ , ಕಲಿಕೆ, ಲಗೋರಿ, ಗೋಲಿ, ಚಿಣಿಮಣಿ, ಕಬ್ಬಡಿ,ಕೊಕೊ ಆಟಗಳನ್ನು ಪರಿಚಯಿಸ ಲಾಗುತ್ತಿದೆ.

ಚಿಕ್ಕಮಗಳೂರು ಜಿಪಂ ಮುಖ್ಯಕಾರ್ಯ ನಿರ್ವಾಹಕ ಅಧಿಕಾರಿಗಳ ನಿರ್ದೇಶನದಂತೆ ಕಡೂರಿನ 60 ಗ್ರಾಪಂಗಳಲ್ಲೂ ಶಿಬಿರ ಅನುಷ್ಠಾನಗೊಂಡಿದೆ.

ಪ್ರತೀ ಗ್ರಾಪಂ ಗ್ರಂಥಾಲಯಗಳ ಅರಿವು ಕೇಂದ್ರಗಳಲ್ಲಿಸ್ವಯಂ ಸೇವಕರು, ಶಿಕ್ಷಕರು, ನಿವೃತ್ತ ಶಿಕ್ಷಕರು, ಅಂಗನವಾಡಿ ಕಾರ್ಯಕರ್ತೆಯರು, ಸಂಘ ಸಂಸ್ಥೆಗಳ ಸಂಪನ್ಮೂಲ ವ್ಯಕ್ತಿಗಳಿಂದ ನಡೆಸಲಾಗುತ್ತಿದೆ.

ಗ್ರಾಮೀಣ ಪ್ರದೇಶದ ಮಕ್ಕಳು ಅಂಕಿ ಸಂಖ್ಯೆ, ಸಂವಹನ, ಕೌಶಲ್ಯತೆ ಬಳಸಿ ಓದುವುದು, ಬರೆಯುವುದು, ನಾಯಕತ್ವ ಗುಣಬೆಳೆಸಿ ಕೊಳ್ಳಲು, ಪರಿಸರ, ಸಾಮಾಜಿಕಕಾಳಜಿ,ಸಂಸ್ಕೃತಿ,ಜೀವನಶೈಲಿ, ಸೃಜನಾತ್ಮಕತೆ ಬೆಳೆಸುವುದು ಇದರ ಮೂಲ ಉದ್ದೇಶ.

ಕೆನಾನ್ ಎಂಬ ಸಂಸ್ಥೆ ಶಿಬಿರದಲ್ಲಿ ಮಕ್ಕಳಿಗೆ ಫೋಟೋ ಗ್ರಫಿ ಕೂಡ ಕಲಿಸುತ್ತಿರುವುದರಿಂದ ಮಕ್ಕಳ ಆಸಕ್ತಿಗೆ ನೀರೆರೆದಂತಾಗಿದೆ. ಹಿರೇನಲ್ಲೂರು, ಚಿಕ್ಕಬಳ್ಳೇಕೆರೆ, ಯಗಟಿ, ಹೋಚೀಹಳ್ಳಿ, ಪಂಚನಹಳ್ಳಿ, ಸಿಂಗಟಗೆರೆ, ಹುಲ್ಲೇ ಹಳ್ಳಿ, ವೈ. ಮಲ್ಲಾಪುರ, ಸರಸ್ವತಿಪುರ ಸೇರಿದಂತೆ ಮತ್ತಿತರ ಪಂಚಾಯ್ತಿಗಳ ಶಿಬಿರಗಳಲ್ಲಿ ಈಗಾಗಲೇ ಮಕ್ಕಳು ಉತ್ಸಾಹದಿಂದ ಭಾಗವಹಿಸುತ್ತಿದ್ದಾರೆ.

ತಾಲೂಕಿನಲ್ಲಿ 12 ಕ್ಲಸ್ಟರ್‌ಗಳಿದ್ದು, 12 ವರ್ಷದ ಮಕ್ಕಳಿಗೆ ಛಾಯಾಚಿತ್ರ ಮತ್ತು ತರಬೇತಿಗೆ ಪ್ರತಿ ಗ್ರಾಪಂನಲ್ಲಿ 20 ರಿಂದ 80 ಮಕ್ಕಳು ಭಾಗವಹಿಸುತ್ತಿರುವುದು ವಿಶೇಷ. ದಾನಿಗಳ ಸಹಕಾರದಿಂದ ಊಟ ಮತ್ತು ಸ್ನಾಕ್ಸ್ ಕೂಡ ನೀಡಲಾಗುತ್ತಿದೆ. ಒಟ್ಟಾರೆ ರಾಜ್ಯ ಸರ್ಕಾರದ ಮಹಾತ್ವಾಕಾಂಕ್ಷಿ ಯೋಜನೆ ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗೆ ಪೂರಕವಾಗಿದೆ ಎಂದರೆ ತಪ್ಪಿಲ್ಲ.

ಸ್ನೇಹ ಮಿಲನ ಮಾನವೀಯ ಮೌಲ್ಯಹೆಚ್ಚಿಸಲಿ

ಹಂತುವಾನಿಯ ಸಂತ ಅಂತೋಣಿ ಪ್ರಾಥಮಿಕ ಶಾಲೆಯ ಸ್ನೇಹ ಮಿಲನದಲ್ಲಿ ಸಲಿನ ಕರೆ

- **ಕನ್ನಡಪ್ರಭ ವಾರ್ತೆ** ನರಸಿಂಹರಾಜಪುರ

ಆಧುನಿಕತೆ ಭರಾಟೆಯಲ್ಲಿ ಮನುಷ್ಯರ ಸಂಬಂಧಗಳೇ ಯಾಂತ್ರಿಕವಾಗುತ್ತಿರುವಾಗ ಶಾಲೆಯ ಹಳೆ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಒಂದೆಡೆ ಸೇರುವ ಈ ಸ್ನೇಹ ಮಿಲನ ಪ್ರತಿಯೊಬ್ಬರಲ್ಲೂ ಮಾನವೀಯ ಮೌಲ್ಯಗಳು ಹೆಚ್ಚಾಗಲಿ ಎಂದು ಹಂತುವಾನಿಯ ಸಂತ ಅಂತೋಣಿ ಪ್ರಾಥಮಿಕ ಶಾಲೆ ನಿವೃತ್ತ ಶಿಕ್ಷಕಿ ಸಲಿನ ಕರೆ ನೀಡಿದರು.

ಭಾನುವಾರ ಹಂತುವಾನಿಯ ಸಂತ ಅಂತೋಣಿ ಪ್ರಾಥಮಿಕ ಶಾಲೆಯಲ್ಲಿ ಹಳೇ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಒಂದೆಡೆ ಸೇರುವ ಸ್ನೇಹ ಮಿಲನ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿ ಈ ಶಾಲೆಯಲ್ಲಿ ವ್ಯಾಸಂಗ ಮಾಡಿದ ಅನೇಕ ವಿದ್ಯಾರ್ಥಿಗಳು ಇಂದು ಹೊರ ರಾಜ್ಯ ಹಾಗೂ ವಿದೇಶಗಳಲ್ಲಿ ಉನ್ನತ ಹುದ್ದೆಯಲ್ಲಿದ್ದಾರೆ. ಅವರ ಪ್ರತಿ ದಿನದ ವೃತ್ತಿಯಲ್ಲೂ ಶಾಲೆ ಈ ಶಾಲೆ ನೀಡಿದ ಶಿಕ್ಷಣ, ಸಂಸ್ಕಾರಗಳು ಅಭಿವ್ಯಕ್ತಿಗೊಳ್ಳುತ್ತಿದೆ. ನಮ್ಮ ವಿದ್ಯಾರ್ಥಿಗಳು ಉನ್ನತ ಹುದ್ದೆಗಳಲ್ಲಿ ಸೇವ ಸಲ್ಲಿಸುತ್ತಿದ್ದರೂ ಈಗಲೂ ಶಿಕ್ಷಕರಾದವರಿಗೆ ವಿದ್ಯಾರ್ಥಿಯಂತೆ ಕಾಣುತ್ತಾರೆ. ಅವರನ್ನು ಕಂಡಾಗಲೆಲ್ಲಾ ಬಾಲ್ಯದ ನೆನಪುಗಳು ಮರುಕಳಿಸುತ್ತದೆ. ಸ್ನೇಹ ಮಿಲನ ನಮ್ಮಲ್ಲಿರುವ ಸದ್ಭಾವನೆ ಅರಳುವಂತೆ ಮಾಡುತ್ತದೆ ಎಂದರು.

ಅತಿಥಿಯಾಗಿದ್ದ ರೆ.ಫಾ.ಅಬ್ರಹಾಂ ಮಾತನಾಡಿ, 35 ವರ್ಷದ ಹಿಂದೆ ಹಂತುವಾನಿ ಗ್ರಾಮದ ಸುತ್ತ ಸಂಚರಿಸುವಾಗ ಈ ಪ್ರದೇಶವು ಶೈಕ್ಷಣಿಕವಾಗಿ ಹಿಂದುಳಿದಿರುವುದನ್ನು ಕಂಡಿದ್ದೆವು. ಆದ್ದರಿಂದ 1 ನೇ ತರಗತಿಯಿಂದ 10ನೇತರಗತಿಯವರೆಗೆಶಾಲೆಸ್ಥಾಪಿಸಲುಮುಂದಾದೆವು. ನಮ್ಮ ಪ್ರಯತ್ನದ ಫಲವಾಗಿ ಈ ಗ್ರಾಪಂ ವ್ಯಾಪ್ತಿಯ ಸಾವಿರಾರು ವಿದ್ಯಾರ್ಥಿಗಳು ಈ ಶಾಲೆಯಲ್ಲಿ 10 ನೇ ತರಗತಿಯಲ್ಲಿ ವ್ಯಾಸಂಗ ಮಾಡಲು ಸಾಧ್ಯವಾಯಿತು ಎಂದರು.

ನಿವೃತ್ತ ಮುಖ್ಯೋಪಾಧ್ಯಾಯಿನಿ ಸಿಸ್ಟರ್‌ರೋಸ್ ಬೆಲ್ ಮಾತನಾಡಿ, ಈ ಶಾಲೆಯಲ್ಲಿ ವ್ಯಾಸಂಗ ಮಾಡಿದ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ಇಂದು ಲಕ್ಷಾಂತರ ವೇತನ ಪಡೆಯುತ್ತಿದ್ದಾರೆ.ಆ ಮೂಲಕ ತಮ್ಮ ಕುಟುಂಭ ಹಾಗೂ ಗ್ರಾಮ ಅಭಿವೃದ್ದಿ ಆಗಲು ಕಾರಣ ಕರ್ತರಾಗಿದ್ದಾರೆ ಎಂದರು.

ಸ್ನೇಹ ಮಿಲನದಲ್ಲಿಹಳೇವಿದ್ಯಾರ್ಥಿಗಳಿಂದಸಂಗೀತ, ನೃತ್ಯ ನಡೆಯಿತು. 40 ಕ್ಕೂ ಹೆಚ್ಚು ಶಿಕ್ಷಕ,ಶಿಕ್ಷಕಿಯರನ್ನು ಗೌರವಿಸಲಾಯಿತು. 100 ಕ್ಕೂ ಹೆಚ್ಚು ಮಾಜಿ ವಿದ್ಯಾರ್ಥಿಗಳಿಗೆ ಸ್ಮರಣಿಕೆ ನೀಡಲಾಯಿತು.



ನರಸಿಂಹರಾಜಪುರದ ಹಂತುವಾನಿ ಸಂತ ಅಂತೋಣಿ ಪ್ರಾಥಮಿಕ ಶಾಲೆಯಲ್ಲಿ ನಡೆದ ಸ್ನೇಹ ಮಿಲನ ಕಾರ್ಯಕ್ರಮವನ್ನು ರೆ.ಫಾ. ಅಬ್ರಹಾಂ ಉದ್ಘಾಟಿಸಿದರು.ಮಾಜಿ ಶಿಕ್ಷಕಿ ಶ್ರೀಮತಿ ಸಲಿನ ಮತ್ತಿತರರು ಇದ್ದರು.

ಮರು ಎಣಿಕೆ ಪಾರದರ್ಶಕತೆಗೆ ವಿರುದ್ಧ

ಕೊಪ್ಪ: ಶೃಂಗೇರಿ ಕ್ಷೇತ್ರದ ಅಂಚೆ ಮತಗಳ ಮರು ಎಣಿಕೆ ಪಾರದರ್ಶಕತೆ ವಿರುದ್ಧವಾಗಿದೆ ಎಂದು ಕೆಪಿಸಿಸಿ ಮುಖಂಡ ಎಚ್.ಎಂ.ಸತೀಶ್ ಹೇಳಿದರು.



ಸುದ್ದಿಗೋಷ್ಠಿಯಲ್ಲಿ ಮಾತನಾಡಿ ಟಿ.ಡಿ. ರಾಜೇಗೌಡರಿಗೆ ಬಂದಿದ್ದ 569 ಅಂಚೆ ಮತ ಗಳಲ್ಲಿ 258 ಮತಗಳು ತಿರಸ್ಕೃತಗೊಂಡಿದೆ. ಒಂದು ಬ್ಯಾಲೆಟ್ ಪೇಪರ್‌ನಲ್ಲಿ ಮತ ಚಲಾವಣೆ ಮಾಡಿದ ಎಲ್ಲ 258 ಜನ ಮತದಾರರು 2 ಅಭ್ಯರ್ಥಿಗಳಿಗೆ ಮತ ಚಲಾಯಿಸಿದ್ದಾರೆಂದು ಹೇಳಿದ್ದಾರೆ ಮತ ಹಾಕಿದವರು ಅವಿದ್ಯಾವಂತರಾ? ಒಂದು ಬ್ಯಾಲೆಟ್ ಪೇಪರ್‌ಗೆ ವೋಟ್ ಹಾಕಲು ಎರಡು ಪೆನ್ ಅನ್ನು (ಬೇರೆ ಬೇರೆ ಕಲರ್‌ಇರುವ) ಬಳಸುತ್ತಾರ ಅನ್ನೋದು ಯಕ್ಷ ಪ್ರಶ್ನೆ ಎಂದರು.

ಈಗ ತಿರಸ್ಕಾರಗೊಳಿಸಿರುವ ಮತ ಸ್ವತಃ ಬಿಜೆಪಿ ಎಜೆಂಟರೇ 2023ರಲ್ಲಿ ಒಪ್ಪಿ ಸಹಿ ಮಾಡಿದ್ದರು. ಆ ಸಮಯದಲ್ಲಿ ಒಂದೇ ಬ್ಯಾ ಲೆಟ್ ಪೇಪರ್ ನಲ್ಲಿ 2 ಅಭ್ಯರ್ಥಿಗಳಿಗೆ ಮತ ಹಾಕಿದ್ದರೇ ಬಿಜೆಪಿ ಏಜೆಂಟ್ ಗಳು ಒಪ್ಪುತ್ತೀದ್ದರಾ? ಇದು ಅಕ್ರಮಎಂದುಸಾಮಾನ್ಯರಿಗೂ ಕೂಡ ಅರ್ಥವಾಗುವ ಸಂಗತಿ ಅಂಚೆ ಮತಗಳ ಮರು ಏಣಿಕೆ ಸಂದರ್ಭದಲ್ಲಿ ಬಂದ ಚುನಾವಣಾ ಆಧಿಕಾರಿ ಗೌರವ ಶೆಟ್ಟಿ ಮತಗಳ ಫಲಿತಾಂಶ ಗಳನ್ನು ನ್ಯಾಯಾಲಯಕ್ಕೆ ಕೊಡುತ್ತೇನೆ ಎಂದಿದ್ದ ಅಧಿಕಾರಿಗಳು ಭಾನುವಾರವೇ ಫಲಿತಾಂಶ ಪ್ರಕಟಿಸಿದ ನಡೆ ಅನುಮಾನಾಸ್ಪದ ರಾಜೇಗೌಡರ ವಿಚಾರದಲ್ಲಿ ಅವ ಸರದ ನಿರ್ಧಾರ ಏಕೆ? ಎಂದು ಪ್ರಶ್ನಿಸಿದರು.

ಮಮತೆಯ ಮಡಿಲಿಗೆ ಗೀತ ನಮನ

ವಿಶ್ವ ತಾಯಂದಿರ ದಿನಾಚರಣೆ ಅಂಗವಾಗಿ ನಾಳೆ ಕಾರ್ಯಕ್ರಮ

- **ಕನ್ನಡಪ್ರಭ ವಾರ್ತೆ** ಚಿಕ್ಕಮಗಳೂರು

ವಿಶ್ವ ತಾಯಂದಿರ ದಿನಾಚರಣೆ ಅಂಗವಾಗಿ ಮಡಿಲು ಶೀರ್ಷಿಕೆಯಡಿ 'ಮಮತೆಯ ಮಡಿಲಿಗಿದು ಗೀತ ನಮನ' ಕಾರ್ಯಕ್ರಮವನ್ನು ಮೇ 9 ರ ಸಂಜೆ 6 ಕ್ಕೆ ನಗರದ ಕುವೆಂಪು ಕಲಾಮಂದಿರದಲ್ಲಿ ಆಯೋಜಿಸಲಾಗಿದೆ ಎಂದು ಯುರೇಕಾ ಅಕಾಡೆಮಿ ಮುಖ್ಯಸ್ಥ ದೀಪಕ್ ದೊಡ್ಡಯ್ಯ ತಿಳಿಸಿದರು.



ನಗರದ ಪ್ರಸ್ ಕ್ಲಬ್ ನಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪೂರ್ವಿ ಸುಗಮ ಸಂಗೀತ ಅಕಾಡೆಮಿ ಟ್ರಸ್ಟ್, ಯುರೇಕಾ ಅಕಾಡೆಮಿ, ಕನ್ನಡ ಸಾಹಿತ್ಯ ಪರಿಷತ್ತು, ಲಯನ್ಸ್ ಸಂಸ್ಥೆ ಹಾಗೂ ಕರ್ನಾಟಕ ಸುಗಮ ಸಂಗೀತ ಪರಿಷತ್ತಿನಆಶ್ರಯದಲ್ಲಿಈಕಾರ್ಯಕ್ರಮಆಯೋಜಿಸಲಾಗಿದೆ ಎಂದರು.

ಕಾರ್ಯಕ್ರಮವನ್ನು ಸಂಸ್ಕೃತಿ ಚಿಂತಕಿ ನಾಗಶ್ರೀ ತ್ಯಾಗರಾಜ್ ಉದ್ಘಾಟಿಸಲಿದ್ದಾರೆ. ಯುರೇಖಾ ಅಕಾಡೆಮಿ ಸಂಸ್ಥಾಪಕ ದೀಪಕ್ ದೊಡ್ಡಯ್ಯ ಅಧ್ಯಕ್ಷತೆ ವಹಿಸಲಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಸಿ.ರಮೇಶ್, ಕಸಾಪ ಜಿಲ್ಲಾಧ್ಯಕ್ಷ ಸೂರಿ ಶ್ರೀನಿವಾಸ್, ಕರ್ನಾಟಕ ಸುಗಮ ಸಂಗೀತ ಪರಿಷತ್ತಿನ ಜಿಲ್ಲಾ ಘಟಕದ ಅಧ್ಯಕ್ಷ ಎಸ್.ಎಸ್.ವೆಂಕಟೇಶ್, ಲಯತ್ ಸಂಸ್ಥೆ ಅಧ್ಯಕ್ಷ ಸಿ.ಎನ್.ಕುಮಾರ್, ಕಾರ್ಯದರ್ಶಿ ಗೋಪಿಕೃಷ್ಣ ಉಪಸ್ಥಿತರಿರಲಿದ್ದಾರೆ ಎಂದರು.

ಪೂರ್ವಿ ಸುಗಮ ಸಂಗೀತ ಅಕಾಡೆಮಿ ಟ್ರಸ್ಟ್ ಅಧ್ಯಕ್ಷ ಎಂ.ಎಸ್.ಸುಧೀರ್ ಸಾರಥ್ಯದಲ್ಲಿ ನಡೆಯುವ ಕಾವ್ಯ ಗಾಯನ ಕಾರ್ಯಕ್ರಮದಲ್ಲಿ ರಮ್ಯಾ ಪ್ರಸನ್ನ, ಶ್ರುತಿ ಮಹೇಶ್, ಮಹೇಶ್ ಪ್ರಿಯದರ್ಶನ್, ಚೇತನ್ ರಾಮ್, ರೂಪಾ ಅಶ್ವಿನ್, ಅನುಷಾ, ಪೃಥ್ವಿಶ್ರೀ, ಮೇಘ, ಅರ್ಪಿತಾ, ಕೆ.ಎಸ್.ಚಿನ್ಮಯಿ ಅವರು ತಾಯಿಯ ಕುರಿತಾದ ಚಿತ್ರಗೀತೆಗಳನ್ನು ಹಾಡಲಿದ್ದಾರೆ ಎಂದು ತಿಳಿಸಿದರು.

ಕೀಬೋರ್ಡ್ ನಲ್ಲಿ ಮೆಲ್ವಿನ್ ಲೀಮಾ, ಕೊಳಲಿನಲ್ಲಿ ಸಮರ್ಥ್ ಹೆಗಡೆ, ತಬಲಾದಲ್ಲಿ ವಿಠಲ್ ರಂಗಧೋಳ್ ಹಾಗೂ ರಿದಂ ಪ್ಯಾಡ್ ನಲ್ಲಿ ಮೋಹನ್ ಕುಮಾರ್‌ವಾದ್ಯ ಸಹಕಾರ ನೀಡಲಿದ್ದಾರೆ ಎಂದು ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಪೂರ್ವಿ ಸುಗಮ ಸಂಗೀತ ಅಕಾಡೆಮಿ ಟ್ರಸ್ಟ್ ಅಧ್ಯಕ್ಷ ಎಂ.ಎಸ್. ಸುಧೀರ್, ಗಾಯಕಿ ಸುಮಾ ಪ್ರಸಾದ್ ಉಪಸ್ಥಿತರಿದ್ದರು.

ಕನ್ನಡ ಕೈಂಕರ್ಯ | ನರಸಿಂಹರಾಜಪುರ ತಾಲೂಕು ಕಸಾಪ ಆಶ್ರಯದಲ್ಲಿ 112 ನೇ ಸಂಸ್ಥಾಪನಾ ದಿನಾಚರಣೆಯಲ್ಲಿ ಬೆಮ್ಮನೆ ದಯಾನಂದ್

ಬೃಹದಾಕಾರವಾಗಿ ಬೆಳೆದ ಸಾಹಿತ್ಯ ಪರಿಷತ್ ಕನ್ನಡಿಗರ ಅಸ್ಮಿತೆ

- **ಕನ್ನಡಪ್ರಭ ವಾರ್ತೆ** ನರಸಿಂಹರಾಜಪುರ

ಕೆಲವೇಸಾಹಿತಿಗಳು,ಕನ್ನಡಅಭಿಮಾನಿಗಳಿಂದ ಪ್ರಾರಂಭಗೊಂಡ ಸಾಹಿತ್ಯ ಪರಿಷತ್ ಇಂದು ಬೃಹದಾಕಾರವಾಗಿ ಬೆಳೆದು ಕನ್ನಡಗಿರ ಅಸ್ಮಿತೆ ಹೆಚ್ಚಿಸಿದೆ ಎಂದು ತಾಲೂಕು 10 ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷ ಬೆಮ್ಮನೆ ದಯಾನಂದ್ ತಿಳಿಸಿದರು.

ಮಂಗಳವಾರ ಸಂಜೆ ತಾಲೂಕು ಕಸಾಪದಲ್ಲಿ ನಡೆದ 112 ನೇ ಸಂಸ್ಥಾಪನಾ ದಿನಾಚರಣೆಯಲ್ಲಿ ಸಾಹಿತ್ಯ ಪರಿಷತ್ ಉದಯ, ಉದ್ದೇಶ ಹಾಗೂ ನಡೆದು ಬಂದ ದಾರಿ ಬಗ್ಗೆ ಉಪನ್ಯಾಸ ನೀಡಿದರು. ಕನ್ನಡ ಸಾಹಿತ್ಯ ಪರಿಷತ್ ರಾಜ್ಯದ ಏಕೈಕ ಸ್ವಾಯುತ್ತ ಸಂಸ್ಥೆ. ಕಸಾಪ ಪ್ರತಿ ವರ್ಷ ರಾಜ್ಯ ಸಮ್ಮೇಳನ, ಜಿಲ್ಲಾ ಹಾಗೂ ತಾಲೂಕು ಸಮ್ಮೇಳನ ನಡೆಸುತ್ತಾ ಬಂದಿದೆ. ಇತ್ತೀಚಿನ ವರ್ಷಗಳಲ್ಲಿ ಹೋಬಳಿ ಘಟಕಪ್ರಾರಂಭವಾಗಿದ್ದುಆಘಟಕದಿಂದಲೂ ಕನ್ನಡ ಕಾರ್ಯಕ್ರಮ ನಡೆಸುತ್ತಿದೆ. ಪ್ರಸ್ತುತ ವರ್ಷಗಳಲ್ಲಿ ಕಸಾಪ ಗ್ರಾಮೀಣ ಭಾಗದ ಜನರಿಗೂ ತಲುಪಿದೆ. ಇತ್ತೀಚಿನ ವರ್ಷಗಳಲ್ಲಿ ಕನ್ನಡ ಶಾಲೆಗಳಲ್ಲಿ ಮಕ್ಕಳು ಕಡಿಮೆ ಯಾಗಿ ಕನ್ನಡ ಸರ್ಕಾರಿ ಶಾಲೆ ಮುಚ್ಚುವ ಹಂತ ತಲಪಿದ್ದು ವಿಷಾದದ ಸಂಗತಿ. ಕನ್ನಡ ಶಾಲೆ ಉಳಿಸಲು ಪ್ರತಿಯೊಬ್ಬ ಕನ್ನಡಿಗರು ಪ್ರಯತ್ನ ನಡೆಸಬೇಕಾಗಿದೆ. ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿ ಜ್ಞಾನ ಪೀಠ ಪ್ರಶಸ್ತಿ ಪಡೆದ ಕವಿಗಳ ಹಾಗೂ ಅವರ ಗ್ರಂಥಗಳ ಪರಿಚಯ ಮಾಡಿ ಕೊಡಬೇಕು. ನರಸಿಂಹರಾಜಪುರದಲ್ಲಿ ಕನ್ನಡ ಭವನ ಅಗತ್ಯವಿದ್ದು ಸರ್ಕಾರ ಕನ್ನಡ ಭವನಕ್ಕೆ ನಿವೇಶನ ನೀಡಬೇಕು. ಸಾಹಿತ್ಯ ಸಮ್ಮೇಳನಗಳಿಗೆ ಸರ್ಕಾರ ನೀಡುವ ಅನುದಾನ ಕಡಿಮೆ ಇದ್ದು ಇದನ್ನು ಜಾಸ್ತಿ ಮಾಡಬೇಕು ಎಂದು ಒತ್ತಾಯಿಸಿದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಎಸ್.ಎಚ್.ಪೂರ್ಣೇಶ್ ಮಾತನಾಡಿ, ಮುಂದಿನ ದಿನಗಳಲ್ಲಿ ಕಸಾಪದಿಂದ ಎಸ್.ಎಸ್.ಎಲ್.ಸಿ ಹಾಗೂ ಪಿಯುಸಿಯಲ್ಲಿ ಕನ್ನಡದಲ್ಲಿ ಪೂರ್ಣಾಂಕ ಪಡೆದ ವಿದ್ಯಾರ್ಥಿಗಳನ್ನು ಒಂದೇ ವೇದಿಕೆಯಲ್ಲಿ ಸನ್ಮಾನಿಸಲಾಗುವುದು. ಯಾವುದೇ ಸಂಸ್ಥೆ ಚೆನ್ನಾಗಿ ನಡೆಯಬೇಕಾದರೆ ಎಲ್ಲಾ ಸದಸ್ಯರು ಒಂದು ತಂಡವಾಗಿ ಕೆಲಸ ಮಾಡಬೇಕು. ಸಂಘಟನೆ, ಕ್ರಿಯಾಶೀಲತೆ ಹಾಗೂ ಬದ್ದತೆಯಿಂದ ಕೆಲಸ ಮಾಡಿದರೆ ಜನರಿಗೆ ತಲುಪಲು ಸಾಧ್ಯ ಎಂದರು.

ಕಸಾಪ ಮಹಿಳಾ ಘಟಕದ ಅಧ್ಯಕ್ಷೆ ಭಾಗ್ಯ ನಂಜುಂಡಸ್ವಾಮಿ ಮಾತನಾಡಿ, ಕನ್ನಡದ ಕಟ್ಟಾಳುಗಳಾದ ಸರ್‌ಎಂ. ವಿಶ್ವೇಶ್ವರಯ್ಯ, ಮಿರ್ಜಾ ಇಸ್ಮಾಯಿಲ್ ಹಾಗೂ ನಾಲ್ವಡಿ ಕೃಷ್ಣರಾಜ ಒಡೆಯರ್ ಸೇರಿ ಕರ್ನಾಟಕ ಸಾಹಿತ್ಯ ಪರಿಷತ್ ಎಂಬ ಹೆಸರಿನಲ್ಲಿ ಹುಟ್ಟು ಹಾಕಿದ್ದರು. ನಂತರ ಕನ್ನಡ ಸಾಹಿತ್ಯ ಪರಿಷತ್ ಎಂದು ನಾಮಕರಣ ಮಾಡಲಾಯಿತು. ಸಾಹಿತ್ಯ ಪರಿಷತ್ ಪ್ರಾರಂಭವಾಗಿ 112 ವರ್ಷ ಕಳೆದಿದೆ. ಬೆರಳೆಣಿಕೆಯಷ್ಟು ಜನರು ಇದ್ದ ಕನ್ನಡಸಾಹಿತ್ಯ ಪರಿಷತ್ ಇಂದು ಲಕ್ಷಾಂತರ ಸದಸ್ಯರ ಒಳಗೊಂಡಿದೆ ಎಂದರು.

21 ನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷೆಎಂ.ಜಯಮ್ಮ ಉದ್ಘಾಟಿಸಿದರು. ಸಭೆಯಲ್ಲಿ ರೋಟರಿ ನಿಯೋಜಿತ ಅಧ್ಯಕ್ಷ ಪಿ.ಎಸ್.ವಿದ್ಯಾನಂದಕುಮಾರ್, ಜೇಸಿ ಸದಸ್ಯ ರಾದ ಅಪೂರ್ವ ರಾಘು, ಮಿಥುನ್ ಗೌಡ, ಕಸಾಪ ಸದಸ್ಯ ರಾದ ತಕ್ಷಕ್ ಕುಮಾರ್, ಸುಷ್ಮಾ ಯಗಾಂದರ್, ಹಿರಿಯ ಸದಸ್ಯ ಪಿ.ಸಿ. ಮ್ಯಾಥ್ಯೂ,ಯುಗಾಂದರ್, ಸುಪ್ರೀತ, ಹಿರೇನಲ್ಲೂರು ಶ್ರೀನಿವಾಸ್, ಹರಿಪ್ರಿಯ ಇದ್ದರು.



ಸಂಸ್ಥಾಪನಾ ದಿನಾಚರಣೆಯನ್ನು ಜಿಲ್ಲಾ ಕನ್ನಡ ಸಾಹಿತ್ಯಸಮ್ಮೇಳನ ಸರ್ವಾಧ್ಯಕ್ಷೆ ಎಂ.ಜಯಮ್ಮ ಉದ್ಘಾಟಿಸಿದರು. ಬೆಮ್ಮನೆ ದಯಾನಂದ್, ಭಾಗ್ಯ ನಂಜುಂಡಸ್ವಾಮಿ, ಎಸ್.ಎಚ್.ಪೂರ್ಣೇಶ್ ಮತ್ತಿತರರಿದ್ದರು.

ಸುದ್ದಿ ಸಿಂಚನ

ಐಟಿಐಗೆ ಅರ್ಜಿ ಆಹ್ವಾನ

ಚಿಕ್ಕಮಗಳೂರು: ಕೊಪ್ಪದ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ 2026-27ನೇ ಸಾಲಿಗೆ ಕುಶಲಕರ್ಮಿ ತರಬೇತಿ ಯೋಜನೆಯಡಿ ಎನ್‌ಸಿವಿಟಿ ಸಂಯೋಜನೆ ಪಡೆದ 2 ವರ್ಷ ಅವಧಿ ವೃತ್ತಿಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಆಹ್ವಾನಿಸಲಾಗಿದೆ. 10ನೇ ತರಗತಿ ತೇರ್ಗಡೆ ಹೊಂದಿದ ಆಸಕ್ತ ಅಭ್ಯರ್ಥಿಗಳು ರಾಜ್ಯದ ಯಾವುದೇ ಭಾಗಅಥವಾ ಹತ್ತಿರದ ಐಟಿಐ ವೆಬ್‌ಸೈಟ್ ಮೂಲಕ ಅರ್ಜಿಸಲ್ಲಿಸಲು ಮೇ 8 ಕೊನೆ ದಿನ. ಹೆಚ್ಚಿನ ಮಾಹಿತಿಗೆ ಪ್ರಾಚಾರ್ಯರು, ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ, ಕೊಪ್ಪ ಸಂಪರ್ಕಿಸ ಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಇಂದು ನೇರ ಸಂದರ್ಶನ

ಚಿಕ್ಕಮಗಳೂರು : ಎಸ್‌ಬಿಐಲೈಫ್ ಇನ್ಶೂರೆನ್ಸ್ 352 ಎಂಸಿಸಿ ಸಂಸ್ಥೆಯ ಖಾಲಿ ಹುದ್ದೆಗಳಿಗೆ ನೇರ ಸಂದರ್ಶನದ ಮೂಲಕ ಮೇ 8 ರಂದು ಬೆಳಗ್ಗೆ 10.30ಕ್ಕೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಿದೆ. ಎಸ್‌ಎಸ್‌ಎಲ್‌ಸಿ, ಪಿಯುಸಿ, ಡಿಪ್ಲೋಮಾ ಮತ್ತು ಯಾವುದೇ ಪದವಿ ಪಡೆದ ಅಭ್ಯರ್ಥಿಗಳು ಭಾಗವಹಿಸಬಹುದು. ಹೆಚ್ಚಿನ ಮಾಹಿತಿಗೆ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ ದೂ. 08262-295538 ಸಂಪರ್ಕಿಸಲು ತಿಳಿಸಿದ್ದಾರೆ.

ಬೆಸೆಯುವ ಕೆಲಸ ಮಾಡುವ ಗ್ರಾಮ ಅರಣ್ಯ ಸಮಿತಿ

ನಾಗಲಾಪುರ-ಶಿರಿಗಳಲೆ ಗ್ರಾಮ ಅರಣ್ಯ ಸಮಿತಿಯ ಸಮಗ್ರ ಪುನಶ್ಚೇತನ ತರಬೇತಿ ಕಾರ್ಯಾಗಾರದಲ್ಲಿ ಆದರ್ಶ

• **ಕನ್ನಡಪ್ರಭ ವಾರ್ತೆ** ನರಸಿಂಹರಾಜಪುರ

ಗ್ರಾಮ ಅರಣ್ಯ ಸಮಿತಿಗಳು ಅರಣ್ಯ ಇಲಾಖೆ ಹಾಗೂ ಗ್ರಾಮಸ್ಥರನ್ನು ಬೆಸೆಯುವ ಕೆಲಸ ಮಾಡುತ್ತದೆ ಎಂದು ಚಿಕ್ಕಅಗ್ರಹಾರ ವಲಯ ಅರಣ್ಯಾಧಿಕಾರಿ ಎಂ.ಪಿ.ಆದರ್ಶ ತಿಳಿಸಿದರು.

ಗುರುವಾರ ನಾಗಲಾಪುರ ಗ್ರಾಪಂನಲ್ಲಿ ನಾಗಲಾಪುರ ಮತ್ತು ಶಿರಿಗಳಲೆ ಗ್ರಾಮ ಅರಣ್ಯ ಸಮಿತಿ ಏರ್ಪಡಿಸಿದ್ದ ಸಮಗ್ರ ಪುನಶ್ಚೇತನ ತರಬೇತಿ, ಸಮಗ್ರ ನಿರ್ವಹಣಾ ಯೋಜನೆ ಹಾಗೂ ಸರ್ವ ಸದಸ್ಯರ ಮಹಾಮಂಡಳಿಸಭೆ ಉದ್ಘಾಟಿಸಿ ಮಾತನಾಡಿ ಪಶ್ಚಿಮ ಬಂಗಾಳದಲ್ಲಿ ಪ್ರಥಮ ಬಾರಿಗೆ ಅರಣ್ಯ ಇಲಾಖೆಗೆ ಅರಣ್ಯ ಸಂಪತ್ತು ನೋಡಿಕೊಳ್ಳುವುದು ಕಷ್ಟವಾಗಿದ್ದರಿಂದ ಗ್ರಾಮ ಅರಣ್ಯ ಸಮಿತಿಗಳನ್ನು ರಚಿಸಲಾಯಿತು. ಈ ಸಮಿತಿ ರಚನೆ ನಂತರ ಅರಣ್ಯ ಇಲಾಖೆ ಗ್ರಾಮಸ್ಥರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅರಣ್ಯ ಕಾಪಾಡಿದೆ. ಇದಕ್ಕೂ ಮುಂಚೆ ಅರಣ್ಯ ಇಲಾಖೆ-ಗ್ರಾಮಸ್ಥರ ಮಧ್ಯೆ ದೊಡ್ಡ ಕಂದಕ ಸೃಷ್ಟಿಯಾಗಿತ್ತು. ಗ್ರಾಮಸ್ಥರುಅರಣ್ಯ ಇಲಾಖೆಯನ್ನು ವೈರಿಗಳಂತೆ ಕಾಣುತ್ತಿದ್ದರು. ಈಗ ಅರಣ್ಯ ಇಲಾಖೆ ಹಾಗೂ ಗ್ರಾಮಸ್ಥರ ನಡುವೆ ಬಾಂಧವ್ಯ ಬೆಳೆದಿದೆ ಎಂದರು.



ನರಸಿಂಹರಾಜಪುರ ತಾಲೂಕಿನ ನಾಗಲಾಪುರ ಗ್ರಾಪಂ ವ್ಯಾಪ್ತಿಯ ನಾಗಲಾಪುರ ಮತ್ತು ಶಿರಿಗಳಲೆ ಗ್ರಾಮ ಅರಣ್ಯ ಸಮಿತಿಯಿಂದ ನಡೆದ ಸಮಗ್ರ ಪುನಶ್ಚೇತನ ತರಬೇತಿ ಕಾರ್ಯಾಗಾರವನ್ನು ಚಿಕ್ಕ ಅಗ್ರಹಾರ ವಲಯ ಅರಣ್ಯಾಧಿಕಾರಿ ಎಂ.ಪಿ.ಆದರ್ಶ ಉದ್ಘಾಟಿಸಿದರು.

ನಾಗಲಾಪುರ ಮತ್ತು ಶಿರಿಗಳಲೆ ಗ್ರಾಮ ಅರಣ್ಯ ಸಮಿತಿ ಸ್ಥಾಪಕ ಅಧ್ಯಕ್ಷ ಇ.ಸಿ.ಜೋಯಿ ಮಾತನಾಡಿ, 30 ವರ್ಷಗಳ ಹಿಂದೆ ಪ್ರಾರಂಭವಾದ ನಾಗಲಾಪುರ ಗ್ರಾಮ ಅರಣ್ಯ ಸಮಿತಿ ಕೊಪ್ಪ ಅರಣ್ಯ ವಲಯದಲ್ಲೇ ಅತ್ಯುತ್ತಮ ಸಮಿತಿ ಎಂಬ ಹೆಸರು ಪಡೆದಿತ್ತು. ಗ್ರಾಮಸ್ಥರ ಸಹಕಾರದಿಂದ ನೂರಾರು ಎಕರೆ ಜಾಗದಲ್ಲಿ ಗಿಡ ನೆಟ್ಟು ಗ್ರಾಮ ಅರಣ್ಯ ಸಮಿತಿ ಸದಸ್ಯರಿಗೆ ಹಲವಾರು ತರಬೇತಿ ಹಮ್ಮಿಕೊಳ್ಳಲಾಗಿತ್ತು. ಅನುದಾನದ ಕೊರತೆಯಿಂದ ಈಗ ಚಟುವಟಿಕೆ ಕಡಿಮೆಯಾಗಿದೆ. ಗ್ರಾಮ ಅರಣ್ಯ ಸಮಿತಿ ಬೆಳೆಸಿದ ನೆಡುತೋಪು ಕಡಿತಲೆಯಾದರೆ ಅದರ ಲಾಭ ಗ್ರಾಮ ಅರಣ್ಯ ಸಮಿತಿಗೂ ಬರಲಿದೆ ಎಂದರು.

ರಾಜ್ಯ ಮಟ್ಟದ ಸಂಪನ್ಮೂಲ ವ್ಯಕ್ತಿ ಜೆ.ನಾಗರಾಜ್ ಮಾತನಾಡಿ, ಅರಣ್ಯ ಸಂಪತ್ತು ಉಳಿಸಲು ಗ್ರಾಮಸ್ಥರು ಮನಸ್ಸು ಮಾಡಬೇಕು. ಅರಣ್ಯ ಇಲಾಖೆ ಜೊತೆ ಸಹಕಾರ ನೀಡಬೇಕು. ಅರಣ್ಯ ಸಂಪತ್ತು ಹೆಚ್ಚಾದರೆ ಮಳೆ, ಬೆಳೆ ಉತ್ತಮವಾಗಿ ಉತ್ತಮ ಗಾಳಿ, ಪರಿಸರ ಸಿಗಲಿದೆ. ನಮ್ಮ ಅರಣ್ಯ, ಪರಿಸರ ಮುಂದಿನ ಪೀಳಿಗೆಗೆ ಹಸ್ತಾಂತರಿಸಬೇಕಾಗಿದೆ. ಸಮಿತಿ ಮೂಲಕ ಬೆಳೆಸಿದ ನೆಡತೋಪು ಕಡಿತಲೆ ನಂತರ ಶೇ75 ರಷ್ಟು ಹಣ ಗ್ರಾಮ ಅರಣ್ಯ ಸಮಿತಿಗೆ ನೀಡಲಾಗುವುದು ಎಂದರು.

ಸಭೆ ಅಧ್ಯಕ್ಷತೆ ವಹಿಸಿದ್ದ ನಾಗಲಾಪುರ ಮತ್ತು ಶಿರಿಗಳಲೆ ಗ್ರಾಮ ಅರಣ್ಯ ಸಮಿತಿ ಅಧ್ಯಕ್ಷ ಕೆ.ರವಿ ಮಾತನಾಡಿ, ಮನುಷ್ಯರು, ಪ್ರಾಣಿ ಪಕ್ಷಿಗಳು, ಜೀಸಂಕುಲನ ಉಳಿಯರು ಅರಣ್ಯ ಅಗತ್ಯ. ಗ್ರಾಮ ಅರಣ್ಯ ಸಮಿತಿ ನಿಕಟಪೂರ್ವ ಅಧ್ಯಕ್ಷರ ಸಲಹೆ ಪಡೆದು ಕ್ರಿಯಾ ಯೋಜನೆ ತಯಾರಿಸಿ ಗ್ರಾಮ ಅರಣ್ಯ ಸಮಿತಿಯಿಂದ ಇನ್ನಷ್ಟು ಉತ್ತಮ ಕೆಲಸ ಮಾಡಲಾಗುವುದು ಎಂದರು.

ಈ ಸಂದರ್ಭದಲ್ಲಿ ಹೊನ್ನಾಳಿ ಅಂಗನವಾಡಿ ಕಾರ್ಯಕರ್ತೆ ವನಜಾಕ್ಷಿ ಗೆ ಸಾಲುಮರದ ತಿಮ್ಮಕ್ಕ ಸದ್ಭಾವನಾ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು. ಅತಿಥಿಗಳನ್ನು ಗೌರವಿಸಿ, ಸಮಿತಿ ಸದಸ್ಯರಿಗೆ ಪ್ರತಿಜ್ಞಾ ವಿಧಿ ಬೋಧಿಸಲಾಯಿತು. ಸಭೆಯಲ್ಲಿ ಕಂದಾಯ ಇಲಾಖೆ ಆರ್.ಐ.ಮಂಜುನಾಥ್, ಪತಂಜಲಿ ಸಂಸ್ಥೆ ಆಡಳಿತಾಧಿಕಾರಿ ಎಂ. ಪೂವಯ್ಯ, ಗ್ರಾಮ ಅರಣ್ಯ ಸಮಿತಿಯ ಮಾಜಿ ಅಧ್ಯಕ್ಷರಾದ ವಿಜಯಕುಮಾರ್, ಎಂ.ಡಿ.ಸಜಿ, ಜೇಮ್ಸ್, ಶಿವಮೊಗ್ಗ ಪತಂಜಲಿ ಸಂಸ್ಥೆ ಸರಳಾ ವಾಸನ್, ಯಶೋದ ನಾಗರಾಜ್, ಕಲಾ ವೀರೇಶ್, ಉಪ ವಲಯ ಅರಣ್ಯಾಧಿಕಾರಿ ರಂಗನಾಥ ಅಥಾಲಿಟಿ, ಗಸ್ತು ಅರಣ್ಯ ಪಾಲಕ ಎಂ.ಡಿ.ನಾಗರಾಜ ಇದ್ದರು.

ಚರ್ಚೆಗೆ ಅವಕಾಶ ಕೊಡದೆ ಮಹಿಳಾ ಮೀಸಲು ಮಸೂದೆ ಮಂಡನೆ: ರಚನಾ



ತರೀಕೆರೆ ಮತ್ತು ಅಜ್ಜಂಪುರ ಮಹಿಳಾ ಕಾಂಗ್ರೆಸ್ನಿಂದ ನಡೆದ ಕಾರ್ಯಕರ್ತರ ಸಭೆಯಲ್ಲಿ ತಾಪಂ ಕೆಡಿಪಿ ಸದಸ್ಯೆ ರಚನಾಶ್ರೀನಿವಾಸ್ ಮಾತನಾಡಿದರು. ಪರ್ವಿನ್ ತಾಜ್, ಹೇಮಲತಾ ರೇವಣ್ಣ ಮತ್ತಿತರರು ಇದ್ದರು.

• **ಕನ್ನಡಪ್ರಭ ವಾರ್ತೆ** ತರೀಕೆರೆ

ಕೇಂದ್ರದ ಬಿಜೆಪಿ ಸರ್ಕಾರ ಹಲವು ಷರತ್ತುಗಳೊಂದಿಗೆ ಸುಧೀರ್ಘ ಚರ್ಚೆಗೆ ಅವಕಾಶವನ್ನೇ ಕೊಡದೆ ಮಹಿಳಾ ಮೀಸಲಾತಿ ಮಸೂದೆ ಮಂಡಿಸಿ ಸೋಲು ಅನುಭವಿಸಿದೆ. ಅದರ ವೈಫಲ್ಯವನ್ನು ಕಾಂಗ್ರೆಸ್ ಪಕ್ಷದ ಮೇಲೆ ಹೊರಿಸಲು ಹೊರಟಿದೆ ಎಂದು ತಾ.ಪಂ. ಕೆಡಿಪಿ ಸದಸ್ಯೆ ರಚನಾ ಶ್ರೀನಿವಾಸ್ ದೂರಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ತರೀಕೆರೆ ಮತ್ತು ಅಜ್ಜಂಪುರ ಮಹಿಳಾ ಕಾಂಗ್ರೆಸ್ ನಿಂದ ಆಯೋಜಿಸಿದ್ದ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿ ಮಹಿಳಾ ಮೀಸಲಾತಿ ವಿಚಾರದಲ್ಲಿ ಕೇಂದ್ರದ ಬಿಜೆಪಿ ಸರ್ಕಾರ ಕಾಂಗ್ರೆಸ್ ವಿರುದ್ಧ ಅನಗತ್ಯ ಅಪಪ್ರಚಾರ ಮಾಡುತ್ತಿದೆ. ಕಾಂಗ್ರೆಸ್ ಮಹಿಳೆಯರ ಪರವಾಗಿದ್ದು ಶಕ್ತಿ ನೀಡಿದೆ. ಈ ಹಿಂದೆ ದೇಶದ ರಾಷ್ಟ್ರಪತಿ, ಪ್ರಧಾನ ಮಂತ್ರಿ, ಲೋಕಸಭೆ ಸ್ಪೀಕರ್‌ಸ್ಥಾನವನ್ನು ಕಾಂಗ್ರೆಸ್ ಪಕ್ಷ ಮಹಿಳೆಯರಿಗೆ ನೀಡಿರುವುದು ಶ್ಲಾಘನೀಯ. ಐತಿಹಾಸಿಕ ವಿಚಾರ. ಬಿಜೆಪಿ ಕೇವಲ ರಾಜಕೀಯ ಲಾಭಕ್ಕಾಗಿ ಕಾಂಗ್ರೆಸ್ ಪಕ್ಷವನ್ನು ದೂಷಿಸುವ ಕೆಲಸ ಮಾಡುತ್ತಿದೆ ಎಂದು ಆರೋಪಿಸಿದರು.

ತರೀಕೆರೆ ಬ್ಲಾಕ್ ಕಾಂಗ್ರೆಸ್ ಮಹಿಳಾ ಘಟಕದ ಅಧ್ಯಕ್ಷೆ ಪರ್ವಿನ್‌ತಾಜ್ ಮಾತನಾಡಿ, ನಾರಿಶಕ್ತಿ ವಂದನಾ ಅಧಿನಿಯಮದ ಪ್ರಕಾರ ಮಹಿಳೆಯರಿಗೆ ಶೇ.33 ರಷ್ಟು ಮೀಸಲಾತಿ ನೀಡಬೇಕು. ನಮಗೆ ಭಿಕ್ಷೆ ಬೇಡ, ಹಕ್ಕು ಬೇಕು. ಮಹಿಳೆಯರು ಎಲ್ಲಾ ರಂಗದಲ್ಲೂ ಉತ್ತಮ ಆಡಳಿತ ನೀಡುತ್ತಿದ್ದಾರೆ. ಮಹಿಳಾ ಮೀಸಲಾತಿ ಮಸೂದೆ ಸೋಲಿನ ವಿಚಾರದ ಸತ್ಯ ತಿಳಿಸಲು ದೇಶದಾದ್ಯಂತ ಕಾಂಗ್ರೆಸ್ ಹೋರಾಟ ನಡೆಸಲಿದೆ ಎಂದು ತಿಳಿಸಿದರು.

ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷೆ ಹೇಮಲತಾ ರೇವಣ್ಣ ಮಾತನಾಡಿ, ಕಾಂಗ್ರೆಸ್ ಮಹಿಳೆಯರಿಗೆ ಎಲ್ಲಾ ಸ್ಥಾನಮಾನ, ಅಧಿಕಾರ ನೀಡಿದೆ. ಮಹಿಳೆಯರ ಬಗ್ಗೆ ಕಿಂಚಿತ್ತೂ ಗೌರವವಿಲ್ಲದ ಬಿಜೆಪಿ ಸರ್ಕಾರ ಚುನಾವಣೆ ಲಾಭ ಪಡೆಯುವ ದುರುದ್ದೇಶದಿಂದ ಮಂಡಿಸಿದ ಮಸೂದೆಗೆ ಸೋಲಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಅಜ್ಜಂಪುರ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ರಂಜಿತಾ, ಮುಖಂಡರಾದ ಲಕ್ಷ್ಮೀಬಾಯಿ, ನಾಗವೇಣಿ, ಅಲಮೇಲು, ಸಾಕಿಬಾಯಿ, ಶಕುಂತಲ ಹಾಗೂ ಇತರರು ಹಾಜರಿದ್ದರು.

ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಎಂ.ಕೆ.ರಂಗನಾಥ್ ಅಧ್ಯಕ್ಷ



• **ಕನ್ನಡಪ್ರಭ ವಾರ್ತೆ** ಕಡೂರು

ತಾಲೂಕಿನ ಮರವಂಜಿ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಎಂ.ಕೆ.ರಂಗನಾಥ್ ಆಯ್ಕೆಯಾದರು.

ಅಧ್ಯಕ್ಷರಾಗಿದ್ದ ಎಂ.ಕೆ. ಶಿವಣ್ಣ ರಾಜೀನಾಮೆಯಿಂದ ತೆರವಾದ ಅಧ್ಯಕ್ಷ ಸ್ಥಾನದ ಚುನಾವಣೆಗೆ ಸಂಘದ ನಿರ್ದೇಶಕ ಜಿ.ಟಿ. ದೇವರಾಜ್ ಮತ್ತು ಎಂ.ಕೆ.ರಂಗನಾಥ್ ಇಬ್ಬರು ನಾಮಪತ್ರ ಸಲ್ಲಿಸಿದ್ದರು. ಒಟ್ಟು 13ಸದಸ್ಯ ಬಲ ಹೊಂದಿದ ಸಂಘದ ಆಡಳಿತ ಮಂಡಳಿಯಲ್ಲಿ ನಡೆದ ಚುನಾವಣೆಯಲ್ಲಿ ಜಿ.ಟಿ. ದೇವರಾಜ್ 6 ಮತಗಳನ್ನು ಪಡೆದು ಪರಭಾವಗೊಂಡರೆ ಎಂ.ಕೆ. ರಂಗನಾಥ್ 7 ಮತಗಳನ್ನು ಪಡೆದು ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆಂದು ಚುನಾವಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ ಸಹಕಾರ ಸಂಘದ ಅಭಿವೃದ್ಧಿ ಅಧಿಕಾರಿ ಅನುಪಮಾ ಘೋಷಿಸಿದರು.

ಆನಂತರ ನಡೆದ ಅಭಿನಂದನೆ ಸಮಾರಂಭದಲ್ಲಿ ತಾಪಂ ಮಾಜಿ ಅಧ್ಯಕ್ಷ ಹೋಚಿಹಳ್ಳಿ ಭೋಗಪ್ಪ ಮಾತನಾಡಿ, ಸಹಕಾರ ಕ್ಷೇತ್ರದಲ್ಲಿ ಎಲ್ಲರ ವಿಶ್ವಾಸ ಗಳಿಸುವುದು ಮುಖ್ಯವಾಗಲಿದೆ. ರೈತರ ಹಿತ ಕಾಪಾಡುವ ಮೂಲಕ ನೂತನವಾಗಿ ಆಯ್ಕೆಗೊಂಡ ಅಧ್ಯಕ್ಷರು ಸಂಘದ ಅಭಿವೃದ್ಧಿಗೆ ಒತ್ತು ನೀಡಿ ಕಾರ್ಯ ನಿರ್ವಹಿಸುವಂತಾಗಲಿ ಎಂದರು.

ಸಂಘದ ನೂತನ ಅಧ್ಯಕ್ಷ ಎಂ.ಕೆ. ರಂಗನಾಥ್ ಮಾತನಾಡಿ, ನಿರ್ದೇಶಕರ ವಿಶ್ವಾಸ ಪಡೆದು ಸಂಘದ ಪ್ರಗತಿಗೆ ಪ್ರಾಮಾಣಿಕವಾಗಿ ಶ್ರಮಿಸುವ ಜೊತೆಗೆ ಸಹಕಾರಿ ಕ್ಷೇತ್ರದ ಬೆಳವಣಿಗೆಗೆ ಎಲ್ಲರ ಸಹಕಾರ ಅತಿಮುಖ್ಯ ಎಂದರು.

ಸಂಘದ ಉಪಾಧ್ಯಕ್ಷ ಶಾಂತಕುಮಾರ್, ನಿರ್ದೇಶಕರಾದ ಓಂಕಾರಪ್ಪ, ರಾಜಣ್ಣ, ಅಮ್ಮಯ್ಯಮ್ಮ, ಸುಶೀಲಮ್ಮ, ದಿನೇಶ್, ಹರೀಶ್, ಸತೀಶ್, ರಾಮಕ್ಕ, ಡಿಸಿಸಿ ಬ್ಯಾಂಕ್ ಮೇಲ್ವಿಚಾರಕ ಭರತ್, ಸಂಘದ ಸಿಇಒ ಪ್ರಭಾಕರ್, ರಂಗಪ್ಪ, ಜಯಣ್ಣ, ರಮೇಶ್, ಹೋಚಿಹಳ್ಳಿ ನಿಂಗಪ್ಪ, ಓಂಕಾರಪ್ಪ, ಕಲ್ಲೇಶ್, ನಿಂಗರಾಜ್, ಕಲ್ಲೇಶ್ ಮತ್ತಿತರಿದ್ದರು.

ಆಸ್ತಿ ತೆರಿಗೆ ಪಾವತಿಗೆ ರಿಯಾಯ್ತಿ ವಿಸ್ತರಣೆ

ನರಸಿಂಹರಾಜಪುರ: ಪಟ್ಟಣದ ವ್ಯಾಪ್ತಿಯ ವಾಣಿಜ್ಯ ಕಟ್ಟಡ ಮತ್ತು ಮನೆಗಳ ಆಸ್ತಿ ತೆರಿಗೆ ಮೇ 31 ರ ಒಳಗೆ ಕಟ್ಟಿದರೆ ಶೇ 5 ರಷ್ಟು ರಿಯಾಯ್ತಿ ನೀಡಲಾಗುವುದು. ಆದ್ದರಿಂದ ಎಲ್ಲಾ ಕಟ್ಟಗಳ ಮಾಲೀಕರು ತಮ್ಮ ಆಸ್ತಿ ತೆರಿಗೆ ಪಾವತಿಸಬೇಕು ಎಂದು ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಆರ್.ವಿ.ಮಂಜುನಾಥ್ ಮನವಿ ಮಾಡಿದ್ದಾರೆ.

ಪತ್ರಿಕಾ ಹೇಳಿಕೆ ನೀಡಿ, ಈ ಹಿಂದೆ ಏ. 30 ರ ಒಳಗೆ ಆಸ್ತಿ ತೆರಿಗೆ ಕಟ್ಟಿದವರಿಗೆ ಶೇ 5 ರಷ್ಟು ರಿಯಾಯ್ತಿ ನೀಡಲಾಗಿದೆ. ಈ ಅವಧಿಯನ್ನು ಮೇ 31 ರ ವರೆಗೆ ವಿಸ್ತರಿಸಲಾಗಿದೆ. ನೀರು ಸಂಪರ್ಕ ಹೊಂದಿದ ಮನೆ ಮಾಲೀಕರು ಬಾಕಿ ಇರುವ ನೀರಿನ ಶುಲ್ಕ ಕಡ್ಡಾಯವಾಗಿ ಪಾವತಿಸಬೇಕು. ಇಲ್ಲದಿದ್ದಲ್ಲಿ ನಲ್ಲಿ ಸಂಪರ್ಕ ಕಡಿತಗೊಳಿಸಲಾಗುವುದು. ಪಟ್ಟಣ ವ್ಯಾಪ್ತಿಯಲ್ಲಿ ಉದ್ಯಮ ನಡೆಸುತ್ತಿರುವ ಮಾಲೀಕರು ಉದ್ಯಮ ಪರವಾನಿಗೆ ಮೇ 15 ರ ಒಳಗೆ ನವೀಕರಿಸಬೇಕು.

ಪಪಂ ಮಳಿಗೆಗಳಲ್ಲಿ ವ್ಯಾಪಾರ ಮಾಡುತ್ತಿರುವುವರು ತಮ್ಮಲ್ಲಿ ಇರುವ ಬಾಕಿ ಮಳಿಗೆ ಬಾಡಿಗೆ ಒಂದು ವಾರದೊಳಗೆ ಪಾವತಿಸಿ ಪಟ್ಟಣದ ಅಭಿವೃದ್ಧಿಗೆ ಸಹಕಾರ ನೀಡಬೇಕು. ಇಲ್ಲದಿದ್ದರೆ ಬಾಡಿಗೆ ಕಟ್ಟದ ಮಳಿಗೆಗಳಿಗೆ ಬೀಗ ಹಾಕಿ ಕಾನೂನು ರೀತಿ ಕ್ರಮ ವಹಿಸಲಾಗುವುದು.

ಎಲ್ಲಾ ಮಳಿಗೆಗಳಲ್ಲಿ ವ್ಯಾಪಾರ ಮಾಡುತ್ತಿರುವುವರು ಬಾಡಿಗೆ ಕಟ್ಟಿ ಸಹಕಾರ ನೀಡಬೇಕು ಎಂದು ಮನವಿ ಮಾಡಿದ್ದಾರೆ.